ಅ) ಹಾಗಿದ್ದಲ್ಲಿ ಅವರಿಗೆ ಮನೆಗಳನ್ನು ಕಟ್ಟಿಸಿಕೊಡಲು ಸರ್ಕಾರದದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಮಹಾಂತೇಶ್ ಎಸ್. ಕೌಜಲಗಿ : ಸನ್ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆ ಬೈಲಹೊಂಗಲ ಕೃಷಿ ಮಾರುಕಟ್ಟೆಯಲ್ಲಿ ಸಾಕಷ್ಟು ಸ್ಥಳಾವಕಾಶವಿದೆ. ಅಲ್ಲಿ ಹಣದ ಕೊರತೆಯೂ ಸಹ ಇಲ್ಲ. ಆದ್ದರಿಂದ ಅಲ್ಲಿ ಹಮಾಲರಿಗೆ ಬೇಕಾಗುವಂತಹ ಮನೆಗಳನ್ನು ಕಟ್ಟಿಕೊಟ್ಟರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಅದರ ಬಗ್ಗೆ ಕೂಡಲೇ ಕ್ರಮವನ್ನು ಕೈಗೊಳ್ಳಬೇಕೆಂದು ಕೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) (ಕೃಷಿ ಮಾರುಕಟ್ಟೆ ಸಚಿವರ ಪರವಾಗಿ) : ಸನ್ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆ ಬೈಲಹೊಂಗಲ ಕೃಷಿ ಮಾರುಕಟ್ಟೆಯಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಸಧ್ಯ ಜಾಗವಿಲ್ಲ. ಅಲ್ಲಿ ಹಮಾಲರು ಮನೆಗಳನ್ನು ಕಟ್ಟುತ್ತೇವೆಂದು ಯಾರೂ ಸಹ ಮುಂದೆ ಬಂದಿಲ್ಲ. ಆದರೂ ಕೂಡ ತೀವ್ರವಾಗಿ ಜಾಗವನ್ನು ತೆಗೆದುಕೊಂಡು ಹಮಾಲರಿಗೆ ಮನೆಗಳನ್ನು ಕಟ್ಟಿಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ.

ಕೆ.ಜಿ.ಎಫ್ ವಿಧಾನ ಸಭಾ ಕ್ಷೇತ್ರದಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ನಿರ್ಮಿಸಿರುವ ಮನೆಗಳು

362 - ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯ ವತಿಯಿಂದ ಕೆ.ಜಿ.ಎಫ್. ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಐದು ವರ್ಷಗಳಲ್ಲಿ ನಿರ್ಮಿಸಿರುವ ಮನೆಗಳೆಷ್ಟು ? ವರ್ಷವಾರು ಎಷ್ಟು ಖರ್ಚು ಮಾಡಲಾಗಿದೆ ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಕೆ.ಜಿ.ಎಫ್. ಕ್ಷೇತ್ರದ ವ್ಯಾಪ್ತಿಯಲ್ಲಿ 1993-94 ರಿಂದ 1996-97ರವರೆಗೆ ಮನೆಗಳನ್ನು ನಿರ್ಮಿಸಿರುವುದಿಲ್ಲ. 97-98ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯ ಕ್ರೋಢೀಕೃತ ಹಣದಿಂದ ಅಂಬೇಡ್ಕರ್ ನಗರ ಘೋಷಿತ ಕೊಳಚೆ ಪ್ರದೇಶದಲ್ಲಿ 50 ಮನೆಗಳನ್ನು ನಿರ್ಮಿಸುವ ಕಾಮಗಾರಿಯನ್ನು ಕೈಗೊಂಡಿದ್ದು, ಎಲ್ಲಾ ಮನೆಗಳು ಛಾವಣಿಯ ಮಟ್ಟಕ್ಕೆ ಬಂದಿರುತ್ತವೆ. ಈ ಪೈಕಿ 16 ಮನೆಗಳ ಛಾವಣಿಯ ಕೆಲಸವು ಪೂರ್ಣಗೊಂಡಿರುತ್ತವೆ. ಈವರೆವಿಗೆ ಮೇಲ್ಕಂಡ ಕಾಮಗಾರಿಗೆ 3.00 ಲಕ್ಷ ರೂ.ಗಳು ಖರ್ಚಾಗಿರುತ್ತವೆ.

ಕೆ.ಜಿ.ಎಫ್. ನಗರ ಅಂಡರ್‌ಸನ್ ಪೇಟೆ ಕೊಳಚೆ ಪ್ರದೇಶದಲ್ಲಿ 84 ಮನೆಗಳ ನಿರ್ಮಾಣದ ಕಾಮಗಾರಿಯನ್ನು 1995-96ನೇ ಸಾಲಿನಲ್ಲಿ ತೆಗೆದುಕೊಳ್ಳಲು ಯೋಜಿಸಲಾಗಿತ್ತು. ಈ ಪೈಕಿ 50 ಮನೆಗಳ ನಿರ್ಮಾಣದ ಟೆಂಡರನ್ನು ಮೂರು ಬಾರಿ ಕರೆದರೂ ಯಾವುದೇ ಟೆಂಡರ್‌ದಾರರು ಈ ಕಾಮಗಾರಿಗೆ ಭಾಗವಹಿಸಿರುವುದಿಲ್ಲದ ಕಾರಣ ಯೋಜನೆಯನ್ನು ಕಾರ್ಯಗತಗೊಳಿಸಲಾಗಲಿಲ್ಲ. ಪ್ರಸಕ್ತ ಸಾಲಿನ ಕ್ರಿಯಾ ಯೋಜನೆ ಅಡಿಯಲ್ಲಿ ಈ ಕಾಮಗಾರಿಯನ್ನು ಕಾರ್ಯಗತಗೊಳಿಸಲು ಯೋಜಿಸಲಾಗಿದೆ.

ಶ್ರೀ ಎಸ್. ರಾಜೇಂದ್ರನ್ : ಸನ್ಮಾನ್ಯ ಅಧ್ಯಕ್ಷರೆ, ಅವರು ಉತ್ತರವನ್ನು ಕನ್ನಡದಲ್ಲಿ ಕೊಟ್ಟಿದ್ದಾರೆ. ಇಂಗ್ಲೀಷ್‌ನಲ್ಲಿ ಕೊಟ್ಟಿದ್ದರೆ ನಾನು ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಅನುಕೂಲವಾಗುತ್ತಿತ್ತು.

ಅಧ್ಯಕ್ಷರು : ನೀವು ಏನು ಪ್ರಶ್ನೆಯನ್ನು ಕೇಳಬೇಕು ಅದನ್ನು ನೇರವಾಗಿ ಕೇಳಿ. ಅವರು ಉತ್ತರವನ್ನು ಹೇಳುತ್ತಾರೆ.

ಶ್ರೀ ಎಸ್. ರಾಜೇಂದ್ರನ್ : ಅಧ್ಯಕ್ಷರೆ, ಹೌಸಿಂಗ್ ಬೋರ್ಡ್ ಮತ್ತು ಸ್ಲಂ ಬೋರ್ಡ್ ಹಕ್ಕುಪತ್ರದ ಬಗ್ಗೆ ಅವರು ಏನು ಹೇಳುತ್ತಾರೆಂದರೆ The question that was asked by me was that in KGF, being a reserved constituency area, how many houses have been constructed from 1993 onwards from teh Karnataka Slum Clearance Board. ಅವರು ಉತ್ತರದಲ್ಲಿ ಏನು ಕೊಟ್ಟಿದ್ದಾರೆಂದರೆ ಬರೀ 50 ಮನೆಗಳಿಗೆ ಸಂಬಂಧಪಟ್ಟ ಹಾಗೆ ಕೇವಲ 16 ಮನೆಗಳಿಗೆ ಚಾವಣಿ ಬಂದಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. The Housing Board has not at all constructed 700 houses for the Slum clearance Board in the past 20 years. ಅದರಲ್ಲಿ 1993-98ರವರೆಗೆ 50 ಮನೆಗಳಿಗೆ ಕೊಟ್ಟಿದ್ದಾರೆ. Is it fair for theGovernment to be in administration?

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೌಸಿಂಗ್ ಬೋರ್ಡ್ ಎಂದು ಹೇಳಿದರು. ಈ ಮನೆಗಳನ್ನು ಹೌಸಿಂಗ್ ಬೋರ್ಡಿನಿಂದ ಕಟ್ಟುತ್ತಿಲ್ಲ. ಮನೆಗಳನ್ನು ಸ್ಲಂಬೋರ್ಡಿನಿಂದ ಕಟ್ಟುತ್ತಿರುವುದು. 1993-94ರಲ್ಲಿ ಯಾವುದೇ ಮನೆಗಳನ್ನು ತೆಗೆದುಕೊಂಡಿಲ್ಲ. 1995-96ನೇ ಸಾಲಿನಲ್ಲಿ 50 ಮನೆಗಳನ್ನು ತೆಗೆದುಕೊಂಡಿದ್ದರು. ಅದಕ್ಕೆ ಟೆಂಡರ್ ಹಾಕಿದೆವು. ಯಾರೂ ಸಹ ಟೆಂಡರ್‌ಗೆ ಅರ್ಜಿಯನ್ನು ಹಾಕಲಿಲ್ಲ. 1995-96ನೇ ಸಾಲಿನಲ್ಲಿ ಮನೆಗಳನ್ನು ನಿರ್ಮಿಸಲು ಸಾಧ್ಯವಾಗಲಿಲ್ಲ. 1996-97 ಮತ್ತು 97-98ನೇ ಸಾಲಿನಲ್ಲಿ ಸುಮಾರು 50 ಮನೆಗಳನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ 16 ಮನೆಗಳ ರೂಫ್ ಲೆವರ್‌ವರೆಗೆ ಪೂರ್ಣವಾಗಿದೆ. ಬಾಕಿ 36 ಮನೆಗಳು ರೂಫ್ ಲೆವೆಲ್‌ಗೆ ಬರಬೇಕು. ಸ್ಲಂ ಬೋರ್ಡ್ ಮನೆಗಳನ್ನು ಎಪಿಎಂಸಿಯಿಂದ ಮಾಡುತ್ತಿದ್ದೇವೆ. ರಾಜ್ಯದಲ್ಲಿ ಇಂಥ 2000 ಮನೆಗಳು ಇದೆ. ನಿಮ್ಮ ಕ್ಷೇತ್ರಕ್ಕೆ 50 ಮನೆಗಳು ಬರುತ್ತವೆ. ಅದನ್ನು ಕಟ್ಟಿಸಿಕೊಡುತ್ತೇವೆ.

ಶ್ರೀ ಎಸ್. ರಾಜೇಂದ್ರನ್ : ಟೆಂಡರ್ ಹಾಕುವುದಕ್ಕೆ ಯಾರೂ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಈಗ ಸ್ಲಂಬೋರ್ಡಿನವರು 50 ಮನೆಗಳ ಬಗ್ಗೆ ಟೆಂಡರನ್ನು ಕರೆದ್ದಿದ್ದಾರೆಯೇ ? They called a single person to construct the houses and they agreed.

MR. SPEAKER : You may please discuss with the Minister.

ಶ್ರೀ ಹೆಚ್.ಡಿ. ರೇವಣ್ಣ : 1995-96ನೇ ಸಾಲಿನಿಂದ ಮತ್ತು ಈ ವರ್ಷದ ಕೆಲಸಗಳನ್ನು ಪ್ರಾರಂಭ ಮಾಡಿ ಈಗ 16 ಮನೆಗಳನ್ನು ಮುಗಿಸಿದ್ದೇವೆ. 1995-96 ಮತ್ತು 1996-97ರ ಕೆಲಸವನ್ನು ಈ ವರ್ಷ ತೆಗೆದುಕೊಳ್ಳುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ರಾಜೇಂದ್ರನ್ : ಟೆಂಡರನ್ನು ಕರೆದರೆ ಯಾರೂ ಬರುವುದಿಲ್ಲ. 20 ವರ್ಷದಿಂದ ಹಕ್ಕುಪತ್ರ ಅವರಿಗೆ ಸಿಗುತ್ತಾ ಇಲ್ಲ. ಹಕ್ಕುಪತ್ರವನ್ನು ತಾವು ಕೊಟ್ಟರೆ ಅವರು ಕನ್‌ಸ್ಟ್ರಕ್ಷನ್ ಮಾಡಿ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ.

ಶ್ರೀ ಹೆಚ್.ಡಿ. ರೇವಣ್ಣ : ಫಲಾನುಭವಿಗಳೇ ಮನೆಗಳನ್ನು ಕಟ್ಟಿಕೊಳ್ಳುತ್ತಾರೆಂದರೆ ನಾನು ಅವರಿಗೆ ಹಕ್ಕುಪತ್ರವನ್ನು ಕೊಡಿಸಿಕೊಡುತ್ತೇನೆ.

ಮಂಗಳೂರು ನಗರದ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಗಣಕೀಕೃತ ಮುಂಗಡ ಕಾದಿರಿಸುವಿಕೆ ಕೌಂಟರ್

365 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಂಗಳೂರು ನಗರದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಗಣಕೀಕೃತ ಮುಂಗಡ ಕಾದಿರಿಸುವಿಕೆ ತೆರೆಯಲು ಸರ್ಕಾರವು ಉದ್ದೇಶಿಸಿದೆಯೇ?*

ಆ) *ಹಾಗಿದ್ದಲ್ಲಿ ಇದನ್ನು ಎಲ್ಲಿ ತೆರೆಯಲಾಗುವುದು ಹಾಗೂ ಇದಕ್ಕಾಗಿ ಎಷ್ಟು ಹಣವನ್ನು ತೆಗೆದಿರಿಸಲಾಗುವುದು?*

ಇ) *ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಸಲಹಾ ಸಮಿತಿಯ ಸದಸ್ಯರಿಗೆ ಸಂಸ್ಥೆಯ ಬಸ್‌ಗಳಲ್ಲಿ ಸಂಚರಿಸಲು ಉಚಿತ ಪಾಸ್ ನೀಡಲು ಸರ್ಕಾರವು ಕ್ರಮಕೈಗೊಳ್ಳುವುದೇ?*

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಮುಂಗಡ ಗಣಕೀಕೃತ ಕಿಟಕಿಗಳನ್ನು ಆಗಸ್ಟ್ 1992ರಿಂದ ತೆರೆಯಲಾಗಿದೆ.

ಆ) ಮಂಗಳೂರು ಬಸ್ ನಿಲ್ದಾಣದ ಆವರಣದಲ್ಲಿ 4 ಕಿಟಕಿಗಳು ಈಗಾಗಲೇ ಅಸ್ತಿತ್ವದಲ್ಲಿದೆ.

ಇ) ಯಾವುದೇ ನಿರ್ಧಾರವನ್ನು ತೆಗೆದುಕೊಂಡಿಲ್ಲ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ಬಂದಿರುವ ಪ್ರಶ್ನೆ ಏನೆಂದರೆ ವಿಶೇಷವಾಗಿ ರಾಜ್ಯದಲ್ಲಿರುವ ಪ್ರಮುಖ ನಗರಗಳಿಗೆ ರಿಟರ್ನ್ ಜರ್ನಿಗೆ ಸಂಬಂಧಪಟ್ಟಿರುವ ರಿಸರ್ವೇಷನ್ ಅನ್ನು ಮಾಡುವಂತಹ ಒಂದು ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆಯೆಂದು ನಾನು ತಿಳಿದುಕೊಂಡಿದ್ದೆ, ಅದಕ್ಕಾಗಿ ನಾನು ಕೇಳುತ್ತಿದ್ದೇನೆ. ಕೇವಲ ಇದನ್ನು ಕಂಪ್ಯೂಟರೀಕರಣ